

ಮಂಗಾಣ್ ರಸ್ತೆ, ಮಾತಾ ದೇವಸ್ಥಾನದ ರಸ್ತೆ, ಸಾಮಿಯಾರ್ ತೋಟ ಈ ಮೂರು ರಸ್ತೆಗಳನ್ನು ದಾಟುವುದರೊಳಗೆ ಕುಕ್ಕೆಯಲ್ಲಿದ್ದ ಹತ್ತೂ ಕೋಳಿಗಳು ಮಾರಾಟವಾಗಿ ಹೋದವು. ಅವರು ಬೆಳಗ್ಗೆ ಪಕ್ಕದ ಮನೆಯ ರೇಡಿಯೊದಲ್ಲಿ ತಮಿಳು ಸುದ್ದಿಗಳನ್ನು ಓದುವ ಸಮಯದಲ್ಲಿ ಹೊರಟವರು. ಎಂಟು ಗಂಟೆಯ ಸೈರನ್ ಕೂಗುವುದರೊಳಗೆ ವ್ಯಾಪಾರವೇ ಮುಗಿದುಹೋಯಿತು. ‘ಎಲ್ಲಾ ನೀನು ಸೈಕಲ್ ತಳ್ಳಿಕೊಂಡು ಬಂದ ಕೈಗುಣ ಕಣೋ’ ಎಂದು ಮುತ್ತುಸಾಮಿಯ ಬೆನ್ನನ್ನು ಅವನ ಅಪ್ಪ ತಟ್ಟಿದರು.

ಕೋಳಿ ಕೊಳ್ಳುವುದಕ್ಕಾಗಿ ಹೋಗಿದ್ದಾಗ ಹಳ್ಳಿಯಲ್ಲಿ ಕಾಲಿಗೆ ಗಾಜಿನ ಚೂರು ಚುಚ್ಚಿ ಅವರು ಪಟ್ಟಿಹಾಕಿಕೊಂಡಿರುವುದರಿಂದ, ಭಾನುವಾರದ ವ್ಯಾಪಾರಕ್ಕೆ ಅವರಿಗೆ ಜತೆಯಾಗಿ ಮೊದಮೊದಲು ಅವನು ಸೈಕಲನ್ನು ನೂಕಿಕೊಂಡು ಬಂದನು. ಬಹಳ ಕಡಿಮೆ ಸಮಯದಲ್ಲಿ ಅಂದು ಎಲ್ಲಾ ಕೋಳಿಗಳು ಮಾರಾಟವಾದವು. ಆ ಸಂತೋಷದಲ್ಲಿ ಅವರು ಕೊಟ್ಟ ‘ಕೈಗುಣ’ದ ಬಿರುದಿಗಾಗಿ, ಪ್ರತಿ ಭಾನುವಾರವೂ ಅವನು ಸೈಕಲ್ ನೂಕಬೇಕಾಯಿತು.

ಸೆಬಾಸ್ಟಿಯನ್ ಸೊಲ್ಡಾ ಮನೆಯಲ್ಲಿ ಮೂವತ್ತು ರೂಪಾಯಿ ಬೆಲೆ ಹೇಳಿ ಇಪ್ಪತ್ತೈದು ರೂಪಾಯಿ ಲೆಕ್ಕದಲ್ಲಿ ಅಪ್ಪ ಕೋಳಿಗಳನ್ನು ಮಾರಿಬಿಟ್ಟ. ಹೆಚ್ಚಿನ ಲಾಭ ಗಳಿಸಿದ ಸಂತೋಷ ಅವನ ಮುಖದಲ್ಲಿ ಚೆನ್ನಾಗಿ ಕಂಡಿತು. ಅವನ ಮುಖದ ಪ್ರಕಾಶ ಹೆಚ್ಚಾಗುತ್ತಿದ್ದಂತೆ ಮುತ್ತುಸಾಮಿಯ ಮನಸ್ಸು ಭೀತಿಯಿಂದ ತೊಳಲಿತು. ಅಂತಹ ಸಮಯಗಳಲ್ಲಿ ಅವರ ಕಾಲುಗಳು ಸಾರಾಯಿ ಅಂಗಡಿಯ ಕಡೆಗೆ ತಿರುಗಿಬಿಡುವ ಆಪತ್ತು ಇರುವುದು. ಏನು ಮಾಡುವುದೆಂದು ತಿಳಿಯದೇ ರಾಲೆ ಸೈಕಲನ್ನು ಮುತ್ತುಸಾಮಿ ನೂಕಿಕೊಂಡೇ ನಡೆದ.